EMAIL : dairyadadaari@gmail.com ಸಂಪುಟ: 01 ಸಂಚಿಕೆ: 48

ಬೆಲೆ ರೂ : 2.00

ರಾಯಚೂರು

ಪುಟ: 4

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 27-01-2026


## ರಾಯಚೂರು ಉತ್ಸವದ ಸಿದ್ಧತೆ ವೇಗಗೊಳಿಸಿ: ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಸೂಚನೆ

ಧೈರ್ಯದ ದಾರಿ

**ರಾಯಚೂರು,ಜ.27–** ರಾಯಚೂರು ಜಿಲ್ಲೆಯಲ್ಲಿ ಫೆ.5 ರಿಂದ ಫೆ.7ರವರೆಗೆ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಮತ್ತೊಂದು ಹಂತದ ಸಿದ್ಧತಾ ಸಭೆಯು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜನವರಿ 26ರಂದು ನಡೆಯಿತು. ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, ಆಯಾ ಸಮಿತಿಗಳಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಅತ್ಯಂತ ಮುತುವರ್ಜಿಯಿಂದ ಕಾರ್ಯನಿರ್ವಹಿಸಬೇಕು. ತಮಗೆ ವಹಿಸಿದ ಎಲ್ಲ ಕಾರ್ಯಗಳ ಬಗ್ಗೆ ಗಮನ ಹರಿಸಿ ನಿರ್ವಹಣೆ ಮಾಡಬೇಕು.

ಉತ್ಸವಕ್ಕೆ ಕೆಲವೇ ದಿನಗಳು ಬಾಕಿ ಇದ್ದು ಸಿದ್ಧತಾ ಕಾರ್ಯವನ್ನು ವೇಗಗೊಳಿಸಬೇಕು ಎಂದು ಎಲ್ಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯವಾಗಿ ಫೆ.5 ರಿಂದ ಫೆ.7ರವರೆಗೆ ನಡೆಯುವ ಸಾಂಸ್ಕೃತಿಕ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದರು ಆಗಮಿಸಿ ಕಾರ್ಯಕ್ರಮ ನೀಡುತ್ತಿರುವ ಹಿನ್ನೆಲೆಯಲ್ಲಿ ಸೇರುವ ಜನಸಂದಣಿ ನಿಯಂತ್ರಣದ ಬಗ್ಗೆ ಪೊಲೀಸ್ ಇಲಾಖೆಯು ಈಗಲೇ ರೂಪುರೇಷಗಳನ್ನು ಸಿದ್ಧಪಡಿಸಬೇಕು. ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಅವಘಡಗಳು ನಡೆಯದಂತೆ ಜಿಲ್ಲಾಡಳಿತವು ಎಲ್ಲ ರೀತಿಯ ಮುಂಜಾಗ್ರಯಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಬಹುವರ್ಷಗಳ ನಂತರ ಜಿಲ್ಲೆಯಲ್ಲಿ ಉತ್ಸವ ನಿಗದಿಯಾಗಿರುವುದರಿಂದ ನಮ್ಮೆಲ್ಲರ ನಿರೀಕ್ಷೆಗೆ ತಕ್ಕಂತೆ ಜನತೆ ಸೇರುವಂತಾಗಬೇಕು. ರಾಯಚೂರು ಸಿಟಿ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕುಗಳಿಂದಲೂ ಜನರು ಉತ್ಸವಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯ ಕಾರ್ಯಯೋಜನೆ ರೂಪಿಸಬೇಕು ಎಂದು ಸಚಿವರು ಸಲಹೆ ಮಾಡಿದರು.

ಈಗಾಗಲೇ ಶೇ.80ರಷ್ಟು ಉತ್ಸವದ ಸಿದ್ಧತೆಯ ಕಾರ್ಯ ನಡೆದಿದೆ.



ಬಾಕಿ ಕಾರ್ಯವನ್ನು ಸಹ ಬೇಗನೆ ಪೂರ್ಣಗೊಳಿಸಲಾಗುವುದು. ಉತ್ಸವ ಹಿನ್ನೆಲೆಯಲ್ಲಿ ಬೇರೆ ಬೇರೆ ಸ್ಪರ್ಧೆಗಳು, ಕಾರ್ಯಕ್ರಮಗಳು ಪ್ರತಿ ದಿನ ನಡೆಯುತ್ತಿವೆ. ಈ ಮೂಲಕವು ಸಹ ಉತ್ಸವದ ಬಗ್ಗೆ ಜನತೆಗೆ ಮಾಹಿತಿ ಕೊಡುತ್ತಿದ್ದೇವೆ ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಚಿವರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಬಸನಗೌಡ ದದ್ದಲ್, ಎ.ವಸಂತಕುಮಾರ, ಎಪಿಎಂಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ, ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ವಿವಿಧ 18 ಸಮಿತಿಗಳಲ್ಲಿನ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

## ಕಲ್ಯಾಣ ಕರ್ನಾಟಕ ಸಾರಿಗೆ ಮಾನ್ವಿ ಘಟಕದಿಂದ ಚಾಲಕರ ದಿನಾಚರಣೆ



ಧೈರ್ಯದ ದಾರಿ

**ಮಾನ್ವಿ,ಜ.27–**ಪಟ್ಟಣದ ಕಲ್ಯಾಣ ಕರ್ನಾಟಕ ಸಾರಿಗೆ ಘಟಕದ ಆವರಣದಲ್ಲಿ ನಡೆದ ಚಾಲಕರ ದಿನಾಚರಣೆ ಅಂಗವಾಗಿ ನಡೆದ ಸುರಕ್ಷಿತ ಚಾಲನೆಗಾಗಿ ಧನ್ಯವಾದಗಳು ಕಾರ್ಯಕ್ರಮದಲ್ಲಿ ಮಾನ್ವಿ ಘಟಕ ವ್ಯವಸ್ಥಾಪಕರಾದ ನಾಗರಾಜ ಮಾತನಾಡಿ ಚಾಲಕ ವೃತ್ತಿಗೆ ಅತ್ಯಂತ ಗೌರವವಿದೆ ಜಗತ್ತಿನ ಶ್ರೇಷ್ಟ ಸಾರಥಿ ಶ್ರೀ ಕೃಷ್ಣ ಪರಮಾತ್ಮನಾಗಿದ್ದ ಎಂದು ಪುರಾಣಗಳಲ್ಲಿ ವರ್ಣಿಸಲಾಗುತ್ತದೆ , ಕಲ್ಯಾಣ ಕರ್ನಾಟಕ ಸಾರಿಗೆಯು ಸರ್ಕಾರದ ಶಕ್ತಿ ಯೋಜನೆ,ವಿದ್ಯಾರ್ಥಿಗಳ ಉಚಿತ ಬಸ್ ಪಾಸ್ ಯೋಜನೆ ಸೇರಿದಂತೆ ಅನೇಕ ಯೋಜನೆಗಳ ಉಪಯೋಗ ಜನರಿಗೆ ತಲುಪಿಸುವಲ್ಲಿ ಶ್ರಮಿಸುತ್ತಿದ್ದೇವೆ, ಚಾಲಕರು ನಿಗದಿತ ವೇಗದಲ್ಲಿ ರಸ್ತೆಯಲ್ಲಿ ಸುರಕ್ಷಿತವಾಗಿ ಚಾಲನೆ ಮಾಡುವುದು ಮುಖ್ಯ ಚಾಲಕರನ್ನು ನಂಬಿ ನಿತ್ಯ ಪ್ರಯಾಣಿಕರು ಬಸ್ ಗಳಲ್ಲಿ ಪ್ರಯಾಣವನ್ನು ಮಾಡುತ್ತಿರುವುದರಿಂದ ಅವರ ಸುರಕ್ಷತೆ ಕೂಡ ನಮ್ಮ ಜವಾಬ್ದರಿಯಾಗಿರುತ್ತದೆ ಹಾಗೂ ಚಾಲಕರನ್ನು ನಂಬಿರುವ ಕುಟುಂಬಗಳಿಗಾಗಿ ಚಾಲಕರು ರಸ್ತೆ ನಿಯಮಗಳನ್ನು ಪಾಲಿಸಿ ಅಪಘಾತರಹಿತ ಸುರಕ್ಷಿತ ಚಾಲನೆ ನೀಡಿ ಎಂದು ಕರೆ ನೀಡಿದರು.

ತಾ.ಗ್ಯಾರಂಟಿ ಸಮಿತಿ ತಾ.ಅಧ್ಯಕ್ಷರಾದ ಬಿ.ಕೆ.ಅಂಬರೇಶಪ್ಪ ವಕೀಲರು ಮಾತನಾಡಿದರು.

2025 –26 ನೇ ಸಾಲಿನಲ್ಲಿ ಸುರಕ್ಷಿತ ಚಾಲನೆ ನಡೆಸಿದ ಚಾಲಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೆ ಪುಷ್ಪವನ್ನು ಹಾಕುವ ಮೂಲಕ ವಿಶೇಷವಾಗಿ ಬರಮಾಡಿಕೊಳ್ಳಲಾಯಿತು. ಮಹಿಳಾ ಸಿಬ್ಬಂದಿಗಳು ಚಾಲಕರಿಗೆ ಸಿಂಧೂರವನ್ನು ಹಚ್ಚಿ ಆರತಿಯನ್ನು ಬೆಳಗಿ ಶುಭಕೋರಲಾಯಿತು ಕಾರ್ಯಕ್ರಮದಲ್ಲಿ ಅಶ್ವಿನಿ ಆಸ್ಪತ್ರೆಯ ವೈದ್ಯರಾದ ಡಾ.ರಮ್ಯ ವೀರವಲ್ಲಿ, ಮಾನ್ವಿ ಪೊಲೀಸ್ ಠಾಣೆಯ ಎ.ಎಸ್.ಐ. ಮಲ್ಲರೆಡ್ಡಿ, ,ಪರಪತ್ಯದಾರರಾದ ಸೀರಜುದ್ದಿನ್, ಎ.ಟಿಎಸ್.ಎಂ. ವೈ,ಜಬಲದ್.ಬಸವರಾಜ ಗಡ್ಡಿ, ಮಾನ್ವಿ ಸಾರಿಗೆ ಘಟಕದ ಚಾಲಕರು,ನಿರ್ವಹಕರು, ದುರಸ್ತಿದಾರರು, ನಿಯಂತ್ರಕರು. ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಇದ್ದರು.

## ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆಯಲ್ಲಿ 77ನೇ ಗಣರಾಜ್ಯೋತ್ಸವ ಆಚರಣೆ



ಧೈರ್ಯದ ದಾರಿ


**ಮಾನ್ವಿ,ಜ.27–** ಪಟ್ಟಣದ ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆಯಲ್ಲಿ 77ನೇ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಮಹಾಂತೇಶ್ ಓಲೇಕಾರ್ ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಡಾ. ವೆಂಕಟೇಶ್ ಓಲೇಕಾರ್ ಮಾತನಾಡಿ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯು ಸಂವಿಧಾನದ ಹಕ್ಕುಗಳನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ರವಿಚಂದ್ರ ಮಾತನಾಡಿ ನಮ್ಮ ದೇಶಕ್ಕೆ ಮಹಾತ್ಮ ಗಾಂಧಿಜೀಯವರು ಸ್ವಾತಂತ್ರ್ಯ ದೊರಕಿಸಿಕೊಟ್ಟರೆ ಭಾರತ ದೇಶಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ರವರು ಸಂವಿಧಾನವನ್ನು ರಚನೆ ಮಾಡಿದರು ಎಂದು ಹೇಳಿದರು.

ಪದವಿ ಮಹಾವಿದ್ಯಾಲಯದ ಉಪನ್ಯಾಸಕರಾದ ಅಂಬಣ್ಣ ನಾಯಕ ಉಮಳಿ ಹೊಸೂರು ಮಾತನಾಡಿ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣರ ಬಲಿದಾನವಾದ ದಿನವೆಂದು ಕುರಿತು ತಿಳಿಸಿದರು. ನಂತರ ಆಂಜನೇಯ ನಸಲಾಪುರ ಮಾತನಾಡಿ ಸಂವಿಧಾನದ ಹಿನ್ನಲೆಯ ಬಗ್ಗೆ ತಿಳಿಸಿದರು. ಶ್ರೀ.ಎಸ್.ಎಂ.ಓ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀದೇವಿ ಮಾತನಾಡಿ ಸಂವಿಧಾನವು ನಾವು ಹೇಗೆ ಜೀವಿಸಬೇಕು. ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂದು ತಿಳಿಸಿದರು.

ಡಾ.ಹುಲಿಯಪ್ಪ ದುಮತಿ ಚಂದ್ರಶೇಖರ ಎಚ್ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶಂಕರಪ್ಪ ಅಂಗಡಿ, ವೆಂಕಟೇಶ್ವರ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಎಂ. ಡಿ ಅಶ್ರರ್ ಉಪನ್ಯಾಸಕರಾದ ಅಬ್ದುಲ್ ರಹೀಮ್,ಮಹಾದೇವ ಬೊಮ್ಮನಾಳ, ,ನಾಗರಾಜ ಚಿಮಲಾಪುರ, ಶಿಕ್ಷಕರಾದ ಆಂಜನೇಯ ಸುಂಕೇಶ್ವರ, ಪಾರ್ವತಿ, ವಿರುಪಾಕ್ಷಿ, ಮುಸ್ಕಾನ್ ಸಂತೋಷ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಆಂಜನೇಯ ನಿರೂಪಿಸಿದರೆ, ವಿರುಪಾಕ್ಷಿ ಸ್ವಾಗತಿಸಿದರು ಮಹಾದೇವ ವಂದಿಸಿದರು.

## ಮಾನವಿಯಲ್ಲಿ ಇಂಡಿಯನ್ ಮೋಟರ್ ರಿವೈಂಡಿಂಗ್ ಕಾರ್ಮಿಕರ ಅಸೋಸಿಯೇಶನ್ ವತಿಯಿಂದ 77ನೇ ಗಣರಾಜ್ಯೋತ್ಸವ ಆಚರಣೆ



ಧೈರ್ಯದ ದಾರಿ

**ಮಾನ್ವಿ,ಜ.26–**ಭಾರತದ 77ನೇ ಗಣರಾಜ್ಯೋತ್ಸವವನ್ನು ಇಂಡಿಯನ್ ವೋಟರ್ ರಿವೈಂಡಿಂಗ್ ಕಾರ್ಮಿಕರ ಅಸೋಸಿಯೇಶನ್, ಮಾನವಿ ವತಿಯಿಂದ ಇಂಡಸ್ಟ್ರಿಯಲ್ ಏರಿಯಾ, ಆಟೋ ನಗರ, ಮಾನವಿಯಲ್ಲಿ ರಾಷ್ಟ್ರಪ್ರೇಮ ಹಾಗೂ ಉತ್ಸಾಹದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘಟನೆಯ ಅಧ್ಯಕ್ಷರಾದ ಶ್ರೀ ಅಬ್ದುಲ್ ಖಯ್ಯೂಮ್ ವಹಿಸಿದ್ದರು. ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಗಣರಾಜ್ಯೋತ್ಸವದ ಮಹತ್ವ ಹಾಗೂ ಭಾರತೀಯ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೆ ನೀಡಿರುವ ಹಕ್ಕುಗಳು, ಗೌರವ ಮತ್ತು ಸಮಾನತೆಯ ಕುರಿತು ವಿವರಿಸಿದರು.

ತಮ್ಮ ಭಾಷಣದಲ್ಲಿ ಅವರು, ದೇಶದ ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ಕಾರ್ಮಿಕರು ಶ್ರಮ, ಶಿಸ್ತು ಮತ್ತು ಏಕತೆಯೊಂದಿಗೆ ಕೆಲಸ ಮಾಡುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಬೇಕು ಎಂದು ಕರೆ ನೀಡಿದರು. ಸಂವಿಧಾನದ ಮೌಲ್ಯಗಳನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಸಂಘಟನೆಯ ಸದಸ್ಯರಾದ ಕೃಷ್ಣ, ಖಾಜಾ ಮೊಯಿನುದ್ದೀನ್, ಅಬ್ದುಲ್ ಕರೀಮ್, ಮನ್ಸೂರ್ ನಾಯ್ಕ್, ಹುಸೈನ್ ಬಾಷಾ ನೀರ್ ಮಾನವಿ, ಅಬ್ದುಲ್ ಅಝೀಜ್, ಸಯ್ಯದ್ ಶಮೀಮ್, ಫಾರೂಕ್, ನಾಗರಾಜ ಗೌಡ, ಸಮ್ದಾನಿ, ಬಾಷಾ ಚಿಕಲ್‌ಪರ್ವಿ, ಅಂಜಿ, ಜಲೀಲ್ ನಾಯ್ಕ್, ಜುನೈದ್, ಸಾಜಿದ್, ಆಲಂ, ನೂರ್, ನೀರ್ ಮಾನವಿ ಬಾಷಾ, ಲತೀಫ್, ಜುಬೈರ್, ಲಿಯಾಖತ್, ಹನುಮಂತ, ಇರ್ಫಾನ್, ರಾಮು ಹಾಗೂ ರಾಘವೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದರು. ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ವಿಶೇಷ ಗೌರವವನ್ನು ತಂದಿತು. ಇಂಡಿಯನ್ ಮೋಟರ್ ರಿವೈಂಡಿಂಗ್ ಕಾರ್ಮಿಕರ ಅಸೋಸಿಯೇಶನ್‌ನ ಸದಸ್ಯರು ಹಾಗೂ ಸ್ಥಳೀಯ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದರು.

## ಸಿರವಾರ ಪಟ್ಟಣ ಪಂಚಾಯತ್‌ನಲ್ಲಿ 77ನೇ ಗಣರಾಜ್ಯೋತ್ಸವ ಸಂಭ್ರಮ: ನೂತನ ಅಧ್ಯಕ್ಷ ಹಾಜಿ ಚೌದರಿ ಅವರಿಂದ ಧ್ವಜಾರೋಹಣ

ಧೈರ್ಯದ ದಾರಿ



**ಸಿರವಾರ,ಜ.26–** ದೇಶಾದ್ಯಂತ ಇಂದು 77ನೇ ಗಣರಾಜ್ಯೋತ್ಸವವನ್ನು ಸಡಗರ–ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ಸಿರವಾರ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿಯೂ ಕೂಡ ರಾಷ್ಟ್ರ ಹಬ್ಬವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇತ್ತೀಚೆಗಷ್ಟೇ ಸಿರವಾರ ಪಟ್ಟಣ ಪಂಚಾಯತ್ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹಾಜಿ ಚೌದರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ನೆರವೇರಿಸಿದ ಬಳಿಕ ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿ ಮಾತನಾಡಿದ ಅವರು, "ಸಂವಿಧಾನವು ನಮಗೆ ನೀಡಿರುವ ಹಕ್ಕು ಮತ್ತು ಕರ್ತವ್ಯಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಾಗಿ ಶ್ರಮಿಸೋಣ" ಎಂದು ಕರೆ ನೀಡಿದರು.

ಕರ್ನಾಟಕದ ಸಮಸ್ತ ಜನತಗೆ 77ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಭಾರತವು ತನ್ನನ್ನು ಆಳಿಕೊಳ್ಳಲು ರಚಿಸಿಕೊಂಡ ಸಂವಿಧಾನ ಜಾರಿಗೆ ಬಂದು ಇದೇ ಜನವರಿ 26ಕ್ಕೆ 76 ವರ್ಷಗಳು ಪೂರ್ಣಗೊಂಡಿದೆ. 77ನೇ ಗಣರಾಜ್ಯೋತ್ಸವದ ಶುಭ ದಿನವಾದ ಇಂದು ಸಂವಿಧಾನದ ಮಹತ್ವ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವ ಒಂದಿಷ್ಟು ಚಿಂತನೆಗಳನ್ನು ನನ್ನ ನಾಡಿನ ಜನತೆಯಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.ಎಂದು ಮುಖ್ಯಧಿಕಾರಿಗಳು ಹೇಳಿದರು.

ಕಾರ್ಯಕ್ರಮದ ಮುಖ್ಯಾಂಶಗಳು:ಭಾವಚಿತ್ರಕ್ಕೆ ಪುಷ್ಪಾರ್ಚನೆ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.ಗೌರವ ಉಪಸ್ಥಿತಿ: ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ದೇಶಭಕ್ತಿ ಮೆರೆದರು.

ಸಂದೇಶ: ದೇಶದ ಏಕತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಭಾಷಣಗಳನ್ನು ಗಣ್ಯರು ಮಾಡಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಸುರೇಶ್ ಶೆಟ್ಟಿ.ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಲಕ್ಷ್ಮಿ ಅದೇಪ್ಪಾ ನಾಯಕ್,ಸದಸ್ಯರಾದ ಹಸೇನಲಿ, ಸೂರಿ ದುರುಗಣ್ಣ ನಾಯಕ, ಮಾರ್ಕಂಡಪ್ಪ. ಮೌಲಾಸಾಬ್ ವರ್ಚಸ್ ಸಿರವಾರ ಪಟ್ಟಣದ ಹಿರಿಯ ಮತ್ತು ಹಿರಿಯ ಮುಖಂಡರಾದ,ರಮೇಶ್ ದರ್ಶನಕರ್. ಮಾಜಿ ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಚನ್ನಬಸವ ಗಡ್ಲ. ವಾಹಿದ್ ಸೊಸೈಟಿ. ಅಜ್ಮೀರ್ ಇಬ್ಬುರಾಹಿಂ ಎಸಿ. ಪಾಷಾ ಬಡೆಗರ್ ಹಾಗೂ ಪಂಚಾಯತ್‌ನ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

## ಆದರ್ಶ ವಿದ್ಯಾಲಯಗಳ 6ನೇ ತರಗತಿ ಪ್ರವೇಶಕ್ಕೆ ಅವಕಾಶ

**ರಾಯಚೂರು,ಜ.27–** 2025-26ನೇ ಸಾಲಿನಲ್ಲಿ 2026-27ನೇ ಸಾಲಿನ ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿಗೆ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.

6ನೇ ತರಗತಿಗೆ ದಾಖಲಾತಿಗಾಗಿ 25-02-2026 ರವರೆಗೂ www. schooleducation. karnataka.gov.in ಮತ್ತು www.vidyavahini.karnataka.gov.in ವೆಬ್ ತಾಣಗಳ ಮೂಲಕ ಆದರ್ಶ ವಿದ್ಯಾಲಯ ಮಾದರಿ ಶಾಲೆಯ ಪೋಷಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

2025-26ನೇ ಸಾಲಿನಲ್ಲಿ ಆಯಾ ತಾಲ್ಲೂಕಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅದೇ ತಾಲ್ಲೂಕಿನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆಯಾ ತಾಲ್ಲೂಕಿನ ಖಾಯಂ ನಿವಾಸಿಗಳ ಮಕ್ಕಳು ಬೇರೆ ತಾಲ್ಲೂಕು/ಜಿಲ್ಲೆ/ರಾಜ್ಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಸಹ 6ನೇ ತರಗತಿಗೆ ಮೂಲ ತಾಲ್ಲೂಕಿನಲ್ಲಿ ವ್ಯಾಸಂಗ ಮಾಡಲು ಇಚ್ಚಿಸಿದ್ದಲ್ಲಿ ಮೂಲ ತಾಲ್ಲೂಕಿನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಡಯಟ್ ಯರಮರಸ್‌ನ ನೋಡಲ್ ಅಧಿಕಾರಿ ಉಪನ್ಯಾಸಕರಾದ ಕನಕಪ್ಪ ಮೊ. ದೂ:9945527472 ಹಾಗೂ ವಿವಿಧೆಡೆಯ ಆದರ್ಶ ವಿದ್ಯಾಲಯಗಳ ಯರಮರಸ್ ಮುಖ್ಯಾಧ್ಯಾಪಕರು ಮೊಬೈಲ್ 9481089777, ಮಾನವಿ ಮುಖ್ಯಾಧ್ಯಾಪಕರು ಮೊ:9945542681, ದೇವದುರ್ಗದ ಮುಖ್ಯಾಧ್ಯಾಪಕರು ಮೊ: 9902905064., ಲಿಂಗಸೂಗೂರು ಮುಖ್ಯಾಧ್ಯಾಪಕರು ಮೊ: 9611365346 ಅಥವಾ ಸಿಂಧನೂರು ಮುಖ್ಯಾಧ್ಯಾಪಕರು ಮೊ: 9902858592 ಸಂಪರ್ಕಿಸಬಹುದು ಎಂದು ಡಯಟ್ ಯರಮರಸ್ ರಾಯಚೂರದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಅಭಿವೃದ್ಧಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಉತ್ಸವಕ್ಕೆ ಪ್ರಾಯೋಜಕತ್ವ ನೀಡಲು ಅವಕಾಶ

ಧೈರ್ಯದ ದಾರಿ

**ರಾಯಚೂರು,ಜ.27–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ವನ್ನು ಫೆ.05, ಫೆ.06 ಮತ್ತು ಫೆ.7ರಂದು ರಂದು ಮೂರು ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ. ಈ ಉತ್ಸವಕ್ಕೆ 5 ಲಕ್ಷ ರೂ. ದಿಂದ 10 ಲಕ್ಷ ರೂ.ಗಳ ಒಳಗೆ ಪ್ರಾಯೋಜಕತ್ವ ನೀಡುವವರಿಗೆ ರಾಯಚೂರು ಜಿಲ್ಲಾ ಉತ್ಸವದ ಬ್ಯಾನರನಲ್ಲಿ, ಎಲ್.ಇ.ಡಿ. ಸ್ಕ್ರೀನಲ್ಲಿ, ಪೋಸ್ಟರ್ ಹಾಗೂ ಸಾಮಾಜಿಕ ಜಾಲತಾಣದ ಪ್ರಚಾರಗಳಲ್ಲಿ ತಮ್ಮ ಲೋಗೋವನ್ನು ಅಳವಡಿಸಲಾಗುವುದು ಮತ್ತು ವಿ.ಐ.ಪಿ. ಪಾಸ್ ನೀಡಲಾಗುವುದು ಎಂದು ರಾಯಚೂರು ಉತ್ಸವ ಆಚರಣೆ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

10 ಲಕ್ಷ ರೂ.ಗಳ ಮೇಲ್ಪಟ್ಟು ಪ್ರಾಯೋಜಕತ್ವ ನೀಡುವವರಿಗೆ ಉದ್ಘಾಟನಾ ಸಮಾರಂಭದಲ್ಲಿ ದೀಪ ಬೆಳಗಿಸುವ ಕಾರ್ಯಕ್ರಮದಲ್ಲಿ ಭಾಗಿ ಮಾಡಲಾಗುವುದು. ಅಲ್ಲದೆ ವಿ.ಐ.ಪಿ. ಪಾಸ್ ನೀಡಿ ತಮ್ಮ ಭಾವಚಿತ್ರವನ್ನು ವೇದಿಕೆಯ ಮೇಲೆ ಇರುವ ಎಲ್.ಇ.ಡಿ. ಸ್ಕ್ರೀನಲ್ಲಿ ಬಿತ್ತರಿಸಲಾಗುವುದು. ವಿವಿಧ ಕಾರ್ಯಕ್ರಮಗಳಲ್ಲಿ ಪ್ರಾಯೋಜಕತ್ವವನ್ನು ನೀಡಿರುವ ಮಹನೀಯರನ್ನು ಸ್ಮರಿಸಲಾಗುವುದು. ಕಾರ್ಯಕ್ರಮಕ್ಕೆ ಆಗಮಿಸಿದ ಪ್ರಸಿದ್ಧ ಕಲಾವಿದರೊಂದಿಗೆ ಸೆಲ್ಪಿ ಫೋಟೋ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಮಳಿಗೆಗೆ ಅವಕಾಶ ಕಲ್ಪಿಸಲಾಗುವುದು ಹಾಗೂ ಪೋಸ್ಟರ್, ಸಾಮಾಜಿಕ ಜಾಲತಾಣದ ಪ್ರಚಾರಗಳಲ್ಲಿ ತಮ್ಮ




ಲೋಗೋ ಅಳವಡಿಸಲಾಗುವುದು.

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಆಚರಣೆ ಕುರಿತು ಪ್ರಾಯೋಜಕತ್ವ ನೀಡಲು ಜಿಲ್ಲೆಯ ಎಲ್ಲಾ ಮಹನೀಯರಲ್ಲಿ ರಾಯಚೂರು ಉತ್ಸವ ಆಚರಣೆ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಕೋರಿ ಪ್ರಕಟಣೆ ಹೊರಡಿಸಿದ್ದಾರೆ.

# ರಾಯಚೂರು ಉತ್ಸವ: ಇಂದು ಸೈಕಲ್ ಮ್ಯಾರಾಥಾನ್

**ರಾಯಚೂರು,ಜ.27–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ನಿಮಿತ್ತ ಜಿಲ್ಲಾಡಳಿತದಿಂದ ಜನವರಿ 27ರ ಬೆಳಗ್ಗೆ 6 ಗಂಟೆಗೆ ಸೈಕಲ್ ಮ್ಯಾರಾಥಾನ್ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ.

ಈ ಸೈಕಲ್ ಮ್ಯಾರಾಥಾನ್ ಮಹಾತ್ಮಾಗಾಂಧಿ ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾಗಿ ಬಸವೇಶ್ವರ ಸರ್ಕಲ್, ಲಿಂಗಸುಗೂರು ರೋಡ್, ಯಕ್ಲಾಸಪುರ್, ಯರಮರಸ್, ಬೈಪಾಸ್, ಓಪೆಕ್ ಆಸ್ಪತ್ರೆ, ಗಂಜ್ ಸರ್ಕಲ್, ಬಸವೇಶ್ವರ ಸರ್ಕಲ್ ಮಾರ್ಗವಾಗಿ ಮಹಾತ್ಮಾಗಾಂಧಿ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪುವುದು.

ಈ ಸ್ಪರ್ಧೆಯಲ್ಲಿ ವಿಜೇತರಾಗುವ ಸ್ಪರ್ಧಾಳುಗಳಿಗೆ ಪ್ರಥಮ ಬಹುಮಾನ 10 ಸಾವಿರ ರೂ. ಹಾಗೂ ದ್ವಿತೀಯ ಬಹುಮಾನ 5 ಸಾವಿರ ರೂ.ಗಳನ್ನು ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಉತ್ಸವ: ಜನವರಿ 28ರಂದು ಬಾಡಿ ಬಿಲ್ಡಿಂಗ್ ಸ್ಪರ್ಧೆ

**ರಾಯಚೂರು,ಜ.27–** ಮಿಸ್ಟರ್ ಕಲ್ಯಾಣ ಕರ್ನಾಟಕ 2026 ರಾಜ್ಯಮಟ್ಟದ ಪುರುಷರ ದೇಹದಾರ್ಢ್ಯ ಸ್ಪರ್ಧೆಯು ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಜನವರಿ 28ರ ಸಂಜೆ 4 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಆಸಕ್ತ ದೇಹದಾರ್ಢ್ಯ ಪಟುಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಗ್ರಾಮೀಣ ಶಾಸಕರ ಕಾರ್ಯಾಲಯದಲ್ಲಿ ಗಣರಾಜ್ಯೋತ್ಸವ

ಧೈರ್ಯದ ದಾರಿ

**ರಾಯಚೂರು,ಜ.27–** ರಾಯಚೂರು ಗ್ರಾಮೀಣ ಶಾಸಕರ ಕಾರ್ಯಾಲಯದಲ್ಲಿ ಜನವರಿ 26ರಂದು 77ನೇ ಗಣರಾಜೋತ್ಸವದ ಅಂಗವಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ಅವರು ಧ್ವಜಾರೋಹಣ ನೆರವೇರಿಸಿದರು.

ಇದೆ ವೇಳೆ ಶಾಸಕರು, ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವ ದಿನದ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು.

ರಾಜಪ್ರಭುತ್ವದ ವ್ಯವಸ್ಥೆಯಿಂದ ನಾವುಗಳು ಹೊರಬಂದು, ಪ್ರಜೆಗಳೇ ಮುಖ್ಯ ಎನ್ನುವ ಪ್ರಜಾಪ್ರಭುತ್ವದ ಆಡಳಿತಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ದೇಶದ ಆಡಳಿತದ ನೀತಿ ನಿರೂಪಣೆ ತಿಳಿಸುವ ಸಂವಿಧಾನ ಮತ್ತು ಸಂವಿಧಾನದ ಆಶಯಗಳಿಗೆ ನಾವು ಬದ್ಧರಾಗಿ ಸಾಗಬೇಕು. ಸಂವಿಧಾನ ಜಾರಿಗೆ ಶ್ರಮಿಸಿದ ಎಲ್ಲ ಮಹನೀಯರನ್ನು ಸ್ಮರಿಸೋಣ ಎಂದು ಇದೆ ವೇಳೆ ಶಾಸಕರು ಸಂದೇಶ ನೀಡಿದರು. ಈ ಸಂದರ್ಭದಲ್ಲಿ ಗಿಲ್ಲೇಸೂಗುರ ಮತ್ತು ದೇವಸೂಗುರ ಬ್ಲಾಕ್ ಅಧ್ಯಕ್ಷರು, ಹಿರಿಯ ಮುಖಂಡರು, ಮಹಿಳಾ ಮುಖಂಡರು ಮತ್ತು ಇನ್ನಿತರರು ಉಪಸ್ಥಿತರಿದ್ದರು.



# ಹಳೆ ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗೆ ಬ್ಯಾಗ್, ಕಂಪಾಸ್ ಬಾಕ್ಸ್ ವಿತರಣೆ



ಧೈರ್ಯದ ದಾರಿ

**ರಾಯಚೂರು.ಜ.27–** ನಗರದ ಪೊಲೀಸ್ ಕಾಲೋನಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ "ನಮ್ಮ ಶಾಲೆ ನಮ್ಮ ಹೆಮ್ಮೆ" ಕಾರ್ಯಕ್ರಮದಡಿ ಹಳೆ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಕಂಪಾಸ್ ಬಾಕ್ಸ್ ಹಾಗೂ ಪರೀಕ್ಷಾ ಪ್ಯಾಡ್‌ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ 76ನೇ ಗಣರಾಜ್ಯೋತ್ಸವವನ್ನು ಶಾಲಾ ಆವರಣದಲ್ಲಿ ಸರಳವಾಗಿ ಆಚರಿಸಲಾಯಿತು. ಬೆಳಿಗ್ಗೆ 7.30ಕ್ಕೆ ಎಸ್‌ಡಿಎಂಸಿ ಅಧ್ಯಕ್ಷ ಹನುಮಂತ ಹೇಮಗಡ್ಡಿ ಹಾಗೂ ಶಾಲೆಯ ಮುಖ್ಯಗುರು ಈರಮ್ಮ ಅವರ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು.

ಗಣರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಸದಸ್ಯರಾದ ತಾರಮ್ಮ, ನರಸಿಂಹಸ್ವಾಮಿ, ಸಹ ಶಿಕ್ಷಕರಾದ ರಾಜಶೇಖರ, ಶಂಷದಾ, ಕವಿತಾ, ಸುನಿತಾ, ಶಾಂತ, ಫೈಮಿದಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹಳೆ ವಿದ್ಯಾರ್ಥಿಗಳಾದ ನಿಂಗಪ್ಪ, ಶಶಿಧರ ಅಂಗಡಿ, ನವೀನಕುಮಾರ, ಬಸವಲಿಂಗಮ್ಮ, ಶಿವು, ಶಾಮಸುಂದರ ಸೇರಿದಂತೆ ಅನೇಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### 77ನೇ ಗಣರಾಜ್ಯೋತ್ಸವ ಕಾರ್ಯಕ್ರಮ

# ದೇಶದ ಏಕತೆ, ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆ : ಸಂಜೀವಕುಮಾರ ಕಂದಗಲ್



ಧೈರ್ಯದ ದಾರಿ

**ಲಿಂಗಸುಗೂರು,ಜ.27–** ರಾಷ್ಟ್ರೀಯ ಐಕ್ಯ ಹಾಗೂ ಸಮಗ್ರತೆಯನ್ನು ಕಾಪಾಡಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ಎಲ್ಲರ ಅಭ್ಯುದಯದಲ್ಲಿ ನಮ್ಮ ಅಭ್ಯುದಯವನ್ನು ಕಾಣಬೇಕಿದೆ ಎಂದು ಸಂಸ್ಥೆಯ ಅಧ್ಯಕ್ಷ ಸಂಜೀವಕುಮಾರ ಕಂದಗಲ್ ಕರೆ ನೀಡಿದರು.

ಪಟ್ಟಣದ ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾವಿದ್ಯಾಲಯ, ಶ್ರೀ ಸಂಜೀವ ಶಿಕ್ಷಣ ಮಹಾವಿದ್ಯಾಲಯ(ಬಿ,ಇಡಿ) ಕಾಲೇಜಿನ ಆವರಣದಲ್ಲಿ 77 ನೇ ಗಣರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೇರವೇರಿಸಿ ಮಾತನಾಡಿದ ಅವರು,1947 ರಲ್ಲಿ ಬ್ರಿಟಿಷರಿಂದ ದೇಶ ಸ್ವಾತಂತ್ರ್ಯ ಪಡೆದರೂ ರಾಜರ ಆಳ್ವಿಕೆಯಲ್ಲಿ ಆಡಳಿತ ಹಲವು ಪ್ರದೇಶಗಳಾಗಿ ಹರಿದು ಹಂಚಿ ಹೋಗಿತ್ತು. ಈ ಸಂದರ್ಭದಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲ್ ಮುಂದಾಳತ್ವದಲ್ಲಿ ದೇಶವನ್ನು ಒಗ್ಗೂಡಿಸಲಾಯಿತು. ಬಳಿಕ ಸಂವಿಧಾನ ರಚನೆ ಮಾಡಲು ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆ ಮಾಡಲಾಯಿತು. ಇದರ ಅಂಗವಾಗಿ 1950 ರ ಜನವರಿ 26 ರಂದು ಸಂವಿಧಾನ ಅಸ್ತಿತ್ವಕ್ಕೆ ಬಂದಿತು ಎಂದರು.

ಅಂಬೇಡ್ಕರ್ ರಚಿಸಿದ ಭಾರತದ ಸಂವಿಧಾನವು ನಿಜಕ್ಕೂ ಒಂದು ಅದ್ಭುತ ಕೃತಿ. ಅದರ ಮೂಲ ಆಶಯಗಳು ಜಗತ್ತಿನ ಪ್ರತಿಯೊಂದು ದೇಶಕ್ಕೂ ಮಾದರಿಯಾಗಿವೆ. ಸಂವಿಧಾನವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಸ್ಥಾಪಿಸಿದೆ ಎಂದರು.

ಈ ಸಂದರ್ಭದಲ್ಲಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಅಮರೇಶ ಗೌಡೂರು, ಉಪನ್ಯಾಕರಾದ ವೆಂಕಟೇಶ ಕವಿತಾಳ, ವೆಂಕಟೇಶ ಪೂಜಾರಿ, ಚನ್ನಬಸವ, ಶಬ್ಬೀರಸಾಬ ಸೇರಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಇದ್ದರು.

### ಜಾಗೀರಪನ್ನೂರು: 122ನೇ ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮ

# ಮಹಿಳೆಯರಿಗೂ ಉದ್ಯೋಗದ ಹಕ್ಕು ನೀಡಿದವರು ಅಂಬೇಡ್ಕರ್: ಜೆ.ಶರಣಪ್ಪ ಬಲ್ಲಟಗಿ

ಧೈರ್ಯದ ದಾರಿ

**ಮಾನ್ವಿ,ಜ.27–** ಭಾರತ ದೇಶದಲ್ಲಿ ಪುರುಷರು ಮಾತ್ರ ಉದ್ಯೋಗ ಮಾಡಬೇಕು ಎಂಬುದು ಕಾನೂನಾಗಿತ್ತು. ಮಹಿಳೆಯರನ್ನು ಕೇವಲ ಮಕ್ಕಳನ್ನು ಹೇರುವ ಯಂತ್ರವಾಗಿ, ಗಂಡನ ಸೇವಕಿಯಾಗಿ, ಮಕ್ಕಳನ್ನು ಪೋ?ಷಿಸುವ ಹಾಗೂ ಮನೆ ಕೆಲಸಕ್ಕೆ ಮಾತ್ರ ಸಿಮೀತಗೊಳಿಸಿ ಗುಲಾಮಳಾಗಿ ನಡೆಸಿಕೊಳ್ಳಲಾಗಿತ್ತು. ಪುರುಷರಷ್ಟೆ ಮಹಿಳೆಯರೂ ಕೂಡ ಸಬಲರು ಎಂದು ಪ್ರತಿಪಾದಿಸಿ ಸಂವಿಧಾನಬದ್ಧವಾದ ಹಕ್ಕುಗಳನ್ನು ನೀಡಿದವರು ಬಾಬಾಸಾಹೇಬ್ ಅಂಬೇಡ್ಕರ್ ಎಂದು ಬಹುಜನ ಸಂಘರ್ಷ ಸಮಿತಿ ಸಂಸ್ಥಾಪಕ ಅಧ್ಯಕ್ಷ ಜೆ.ಶರಣಪ್ಪ ಬಲ್ಲಟಗಿ ಅಭಿಮತ ವ್ಯಕ್ತಪಡಿಸಿದರು.

ಮಾನವಿ ತಾಲೂಕಿನ ಜಾಗೀರಪನ್ನೂರು ಗ್ರಾಮದ ಶಾಂತಮ್ಮ - ಭೀಮಪ್ಪ ಇವರ ಮನೆಯಲ್ಲಿ ಬಹುಜನ ಸಂಘರ್ಷ ಸಮಿತಿ ಹಾಗೂ ಜನತಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್(ರಿ) ಬಲ್ಲಟಗಿ ವತಿಯಿಂದ ಸೋಮವಾರ ಆಯೋಜಿಸಿದ್ದ, 122ನೇ ಮನೆ-ಮನೆಗೆ ಅಂಬೇಡ್ಕರ್ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ದಲಿತ, ಶೋಷಿತ ಸಮುದಾಯದವರು ಗೌರವ ಸೂಚಕ ಹೆಸರುಗಳನ್ನು ಇಟ್ಟುಕೊಂಡು, ಅಗೌರವ ತೋರುವ ವೃತ್ತಿಗಳನ್ನು ಬಿಟ್ಟು, ಉತ್ತಮವಾದ ಶಿಕ್ಷಣವನ್ನು ಪಡೆದು, ಉನ್ನತ ಹುದ್ದೆಗಳನ್ನು ಅಲಂಕರಿಸಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ ಆಶಯದಂತೆ ಸ್ವಾವಲಂಬಿಗಳಾಗಿ ಘನತೆ, ಗೌರವದಿಂದ ಬದುಕಬೇಕು ಎಂದರು.



ಸಂಜೆವರದಿ ಕನ್ನಡ ಸಂಜೆ ದಿನಪತ್ರಿಕೆ ಸಂಪಾದಕ ಚಂದ್ರಶೇಖರ್ ಮದ್ಲಾಪೂರ ವಕೀಲರು ಸಂವಿಧಾನ ಪೀಠಿಕೆ ಓದುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಮುಖಂಡ, ಗ್ರಾ.ಪಂ.ಮಾಜಿ ಸದಸ್ಯ ಮೆಕಾಲೆಪ್ಪ ಜಾಗೀರಪನ್ನೂರು ಅಧ್ಯಕ್ಷತೆ ವಹಿಸಿದ್ದರು. ಬಹುಜನ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾಧ್ಯಕ್ಷ ಸಂಪತ್ತುರಾಜ್ ಜಾಗೀರಪನ್ನೂರು ನಿರೂಪಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಹಿರಿಯ ಹೋರಾಟಗಾರ ಅಬ್ರಾಹಂ ಜಾಗೀರಪನ್ನೂರು, ಚಿನ್ನಪ್ಪ ಜಾಗೀರಪನ್ನೂರು, ರಾಯಚೂರು ಕ್ರಾಂತಿ ಪತ್ರಿಕೆ ಸಂಪಾದಕ ಅಜ್ಮತ್ ಖಾನ್ ಮಾನವಿ, ದಸಂಸ ಮುಖಂಡ ಹುಸೇನಪ್ಪ ಜಗ್ಲಿ ಜಾಗೀರಪನ್ನೂರು, ಮಾರಮ್ಮ ಕೊಟ್ನೆಕಲ್, ರತ್ನಮ್ಮ, ಶಿಕ್ಷಕಿ ಪ್ರೇಮ ಮರಿಯಪ್ಪ ಜಾಗೀಪನ್ನೂರು, ಪ್ರಕಾಶಪ್ಪ ಜಾನೇಕಲ್ ಸೇರಿದಂತೆ ಕುಟುಂಬಸ್ಥರು, ಮಹಿಳೆಯರು, ವಿದ್ಯಾರ್ಥಿಗಳು ಭಾಗವಹಿಸಿದ್ಧರು.

800ಕ್ಕೂ ಅಧಿಕ ಜನರಿಂದ ನೋಂದಣಿ * ಅಪರ ಜಿಲ್ಲಾಧಿಕಾರಿ ಶಿವಾನಂದ ಅವರಿಂದ ಚಾಲನೆ

# ರಾಯಚೂರು ಉತ್ಸವದ ಮ್ಯಾರಥಾನ್‌ಗೆ ಉತ್ತಮ ಪ್ರತಿಕ್ರಿಯೆ

ಧೈರ್ಯದ ದಾರಿ



**ರಾಯಚೂರು,ಜ.26–** ರಾಯಚೂರು ಜಿಲ್ಲೆಯಲ್ಲಿ ಫೆಬ್ರವರಿ 5, ಫೆಬ್ರವರಿ 6 ಮತ್ತು ಫೆಬ್ರವರಿ 7ರಂದು ಮೂರು ದಿನಗಳ ಕಾಲ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಜನವರಿ 25ರಂದು ರಾಯಚೂರು ಸಿಟಿಯಲ್ಲಿ ಮ್ಯಾರಥಾನ್ ಓಟ ನಡೆಯಿತು.

ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಸೇರಿದಂತೆ ಬೇರೆ ಬೇರೆ ವರ್ಗದ ಜನರು ಮ್ಯಾರಾಥಾನದಲ್ಲಿ ಭಾಗಿಯಾಗಲು ಬೆಳಗಿನ ಕೊರೆವ ಚಳಿಯಲ್ಲಿಯೇ ನಗರದ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಬಂದು ಸೇರಿದ್ದರು.

ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮ್ಯಾರಾಥಾನಗೆ ಹಸಿರು ಬಾವುಟ ತೋರುತ್ತಿದ್ದಂತೆ ಸ್ಪರ್ಧಾಳುಗಳು ನಾಮುಂದೆ ತಾಮುಂದೆ ಎನ್ನುವಂತೆ ಓಟ ಆರಂಭಿಸಿದರು.

ಜಿಲ್ಲಾ ಕ್ರೀಡಾಂಗಣದಿಂದ ಓಟ ಆರಂಭಿಸಿದ ಸ್ಪರ್ಧಾಳುಗಳು ಆರ್.ಟಿ.ಓ ಸರ್ಕಲ್‌ವರೆಗೆ ತೆರಳಿ ಅಲ್ಲಿಂದ ಮರಳಿ ಕ್ರೀಡಾಂಗಣಕ್ಕೆ ಬಂದು ಸೇರಿದರು.

ಈ ಓಟದಲ್ಲಿ ಪುರುಷರ ವಿಭಾಗದಲ್ಲಿ ಶಿವಾನಂದ ಪ್ರಥಮ ಬಹುಮಾನ, ತಾಯಪ್ಪ ನಾಯಕ ದ್ವಿತೀಯ ಬಹುಮಾನ ಮತ್ತು ಗೋವಿಂದರಾಜ್ ತೃತೀಯ ಬಹುಮಾನ ಗಿಟ್ಟಿಸಿ ಗೆಲುವಿನ ನಗೆ ಬೀರಿದರು.

ಮಹಿಳಾ ವಿಭಾಗದಲ್ಲಿ ಶಾಹೀನ್ ಎಸ್.ಡಿ. ಹುಬ್ಬಳ್ಳಿ ಪ್ರಥಮ, ಜ್ಯೋತಿ ರಾಯಚೂರು ದ್ವಿತೀಯ ಹಾಗೂ ವಿಜಯಲಕ್ಷ್ಮಿ ಅವರು ತೃತೀಯ ಬಹುಮಾನ ಪಡೆದುಕೊಂಡು ಸಂತಷ ವ್ಯಕ್ತಪಡಿಸಿದರು.

ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸ್ಪರ್ಧಾಳುಗಳಿಗೆ ಇದೆ ವೇಳೆ ಕ್ರಮವಾಗಿ 15,000, 10,000 ರೂ ಹಾಗೂ 5000 ರೂ. ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಸೀಲ್ದಾರ್ ಸುರೇಶ್ ವರ್ಮ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ್ ನಾಯಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ವಿಜಯ ಶಂಕರ್, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ಸ್ಪರ್ಧೆಯ ನೋಡಲ್ ಅಧಿಕಾರಿಗಳಾದ ಯುವಜನಾ ಸೇವಾ ಮತ್ತು ಕ್ರೀಡಾ ಇಲಾಖೆಯ ಚಂದ್ರಶೇಖರ ಹೊಸೂರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಮಹಿಬೂಬ್ ಸಾಬ್, ಅಥ್ಲಿಟಿಕ್ ಅಸೋಸಿಯೇಷನ್ ಕಾರ್ಯದರ್ಶಿ ತಿಮ್ಮಾರೆಡ್ಡಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಉತ್ತಮ ಪ್ರತಿಕ್ರಿಯೆ: ರಾಯಚೂರು ಉತ್ಸವ ಅಂಗವಾಗಿ ನಡೆದ ಮ್ಯಾರಾಥಾನ್‌ಗೆ ರಾಯಚೂರು ಜಿಲ್ಲೆಯ ಜನತೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ಸ್ಪರ್ಧೆಗೆ ಸುಮಾರು 800ಕ್ಕೂ ಅಧಿಕ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು.

ಜನವರಿ 27ರಂದು ಸೈಕ್ಲಾಥಾನ್: ರಾಯಚೂರು ಜಿಲ್ಲಾ ಉತ್ಸವ ನಿಮಿತ್ತ ಜನವರಿ 27ರಂದು ಬೆಳಗ್ಗೆ 6 ಗಂಟೆಗೆ ಜಿಲ್ಲಾಡಳಿತ ದಿಂದ ಮಹಾತ್ಮ ಗಾಂಧೀ ಜಿಲ್ಲಾ ಕ್ರೀಡಾಂಗಣದಲ್ಲಿ ಸೈಕ್ಲಾಥಾನ್ ಆಯೋಜನೆ ಮಾಡಲಾಗಿದೆ. ಪ್ರಥಮ ಬಹುಮಾನ 10 ಸಾವಿರ ಹಾಗೂ ದ್ವಿತೀಯ ಬಹು ಮಾನ 5 ಸಾವಿರ ರೂ.ಗಳನ್ನು ನೀಡಲಾಗುವುದು. ಆಸಕ್ತರು ಈ ಸ್ಪರ್ಧೆಯ ನೋಡಲ್ ಅಧಿಕಾರಿಗಳಾ ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರ ಮೊಬೈಲ್ ಸಂಖ್ಯೆ: 9972316898 ಅಥವಾ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ವಿಜಯಶಂಕರ್ ಮೊಬೈಲ್ ಸಂಖ್ಯೆ: 9448427601ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ. ಅಥವಾ ಉತ್ಸವದ ವೆಬ್ ತಾಣ www.raichurutsava.com ಗೆ ಭೇಟಿ ನೀಡಿ ಅಲ್ಲಿ ಅಪ್‌ಲೋಡ್ ಮಾಡಲಾದ ಸೈಕ್ಲಾಥಾನದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಹ ನೋಂದಾಯಿಸಿಕೊಳ್ಳಬಹುದಾಗಿದೆ.

# ಧರ್ಮಸ್ಥಳದ ಶ್ರೀ ವಿರೇಂದ್ರ ಹೆಗಡೆಯವರ ಸಾಮಾಜಿಕ,ಶೈಕ್ಷಣಿಕ ಹಾಗೂ ಧಾರ್ಮಿಕ ಸೇವೆ ಅಪಾರ : ಬಸವನಗೌಡ ಬ್ಯಾಗವಾಟ

ಧೈರ್ಯದ ದಾರಿ




**ಮಾನ್ವಿ,ಜ.26–** ತಾಲೂಕಿನ ಬ್ಯಾಗವಾಟ ಗ್ರಾಮದಲ್ಲಿನ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಾನ್ವಿ ತಾಲೂಕು ಪ್ರಗತಿ ಬಂದು ಸ್ವ–ಸಹಾಯ ಸಂಘಗಳ ಒಕ್ಕೂಟ ಸಂಯುಕ್ತಾಶ್ರಯದಲ್ಲಿ ನಡೆದ ವಲಯ ಮಟ್ಟದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾಜಿ ಶಾಸಕ ಬಸವನಗೌಡ ಬ್ಯಾಗವಟ್ ಮಾತನಾಡಿ ಧರ್ಮಸ್ಥಳದ ಶ್ರೀ ವಿರೇಂದ್ರ ಹೆಗಡೆಯವರ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಸೇವೆ ಅಪಾರವಾಗಿದೆ ರಾಜ್ಯದ ಪ್ರತಿ ಗಾಮೀಣ ಭಾಗದ ಮಹಿಳೆಯರ ಸಬಲಿಕಾರಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಬಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಅನೇಕ ಯೋಜನೆಗಳನ್ನು ಮಹಿಳೆಯರಿಗಾಗಿ ಹಮ್ಮಿಕೊಳ್ಳುವ ಮೂಲಕ ವಿವಿಧ ಸ್ವ–ಉದ್ಯೋಗವನ್ನು ಕೈಗೊಳ್ಳುವುದಕ್ಕೆ ಅಗತ್ಯವಿರುವ ಆರ್ಥಿಕ ನೆರವನ್ನು ಕೂಡ ಸುಲಭವಾಗಿ ದೊರೆಯುವಂತೆ ಮಾಡಿದ್ದಾರೆ ಜೊತೆಗೆ ಸ್ವ–ಉದ್ಯೋಗ ತರಬೇತಿ,ಉಳಿತಾಯ ಮನೋಭಾವನೆಯನ್ನು ಬೆಳೆಸುವುದು,ಗ್ರಾಮಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳ ಅಭಿವೃದ್ದಿಗೆ ನೆರವು,ಕೆರೆಗಳ ಅಭಿವೃದ್ಧಿ, ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಪಠ್ಯಪರಿಕಾರ,ಶಿಕ್ಷಕರ ಸೇವೆ ಸೇರಿದಂತೆ ಅಗತ್ಯ ಸೇವೆಗಳನ್ನು ಟ್ರಸ್ಟ್ ಮಾಡಿಕೊಂಡು ಬಂದಿದೆ ಸಂಸ್ಥೆಯಿಂದ ಸಾಲ ಸೌಲಭ್ಯಗಳನ್ನು ಪಡೆದ ಮಹಿಳೆಯರು ಸಕಾಲದಲ್ಲಿ ಮರುಪಾವತಿ ಮಾಡುವ ಮೂಲಕ ಇನ್ನೂ ಹೆಚ್ಚು ಸೌಲಭ್ಯಗಳನ್ನು ಪಡೆದುಕೊಂಡು ಅಭಿವೃದ್ದಿ ಹೊಂದಬೇಕು ತಮ್ಮ ಮಕ್ಕಳಿಗೆ ಗ್ರಾಮದಲ್ಲಿನ ಶಾಲಾ ,ಕಾಲೇಜ್ ಗಳಲ್ಲಿ ದಾಖಲಿಸಿ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಾನ್ವಿ ತಾಲೂಕು ಯೋಜನಾಧಿಕಾರಿ ಸುನೀತಾ ಪ್ರಭು ಮಾತನಾಡಿ ನಮ್ಮ ಸಂಸ್ಥೆ ವತಿಯಿಂದ ಗ್ರಾವುದಲ್ಲಿನ ಆರ್ಥಿಕವಾಗಿ ದುರ್ಬಲರಾಗಿರುವ ನಿರಾಶ್ರಿತರಾದ ಬಡವರಿಗೆ ಮೂರು ಮನೆಗಳನ್ನು ನಿರ್ಮಿಸಿ ಕೋಡಲಾಗಿದೆ. ಗ್ರಾಮದ 350 ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ ಕೋವಿಡ್ ಸಮಯದಲ್ಲಿ ಆಹಾರದ ಕಿಟ್‌ಗಳನ್ನು ನೀಡಲಾಗಿದೆ ಮಹಿಳೆಯರ ಸಬಲಿಕಾರಣಕ್ಕೆ ಅಗತ್ಯವಿರುವ ಎಲ್ಲಾ ನೆರವನ್ನು ಸಂಸ್ಥೆ ಕಲ್ಪಿಸುತ್ತಿದೆ ಎಂದು ತಿಳಿಸಿದರು. ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಮಹಾಸ್ವಾಮಿಗಳು ಆಶೀರ್ವಾಚನ ನೀಡಿದರು. ಸಾಮೂಹಿಕವಾಗಿ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹೇಶ್ವರಿ ಕೊಟ್ರಯ್ಯಸ್ವಾಮಿ, ಪ್ರಾದೇಶಿಕ ನಿರ್ದೇಶ ಕರಾದ ಜೆ.ಚಂದ್ರಶೇಖರ, ಕಾ.ನಿ.ಪ.ಸಂಘದ ತಾ.ಅಧ್ಯಕ್ಷರಾದ ಅಶೋಕ ತಡಕಲ್, ಮೇಲ್ವಿಚಾರಕ ರಾದ ನರೇಶ ಸೇರಿದಂತೆ ಗ್ರಾಮದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ ಮಹಿಳಾ ಸದಸ್ಯರು ಸೇರಿದಂತೆ ಗ್ರಾಮಸ್ಥಾರು ಭಾಗವಹಿಸಿದರು.

# ಶಾರದಾ ಶಿಕ್ಷಣ ಮಹಾವಿದ್ಯಾಲಯಾದ ಬಿ.ಇಡಿ, ಪ್ರಶಿಕ್ಷಣಾರ್ಥಿ ಪದ್ಮಾವತಿ ಯವರಿಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ದ್ವೀತಿಯ ಸ್ಥಾನ

ಧೈರ್ಯದ ದಾರಿ

**ಮಾನ್ವಿ,ಜ.26–** ರಾಯಚೂರು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಭಾನುವಾರ ಜಿಲ್ಲಾಡಳಿತ ವತಿಯಿಂದ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಮಹಾತ್ವ ವಿಷಯದ ಕುರಿತು ನಡೆದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಮಾನ್ವಿ ಪಟ್ಟಣದ ಶಾರದಾ ಶಿಕ್ಷಣ ಮಹಾವಿದ್ಯಾಲ ಯಾದ ಬಿ.ಇಡಿ, ಪ್ರಶಿಕ್ಷಣಾರ್ಥಿ ಪದ್ಮಾವತಿ ಯವರು ದ್ವೀತಿಯ ಸ್ಥಾನವನ್ನು ಪಡೆದು ಜಿಲ್ಲಾ ಪಂಚಾಯತ್ ಸಿ.ಇ.ಓ. ಈಶ್ವರ ಕುಮಾರ ಕಂದೂ ರವರು ಪ್ರಮಾಣ ಪತ್ರವನ್ನು ವಿತರಿಸಿದರು. ವಿದ್ಯಾರ್ಥಿಯ ಸಾಧನೆಗೆ ಪಟ್ಟಣದ ಶಾರದಾ ಶಿಕ್ಷಣ ಮಹಾವಿದ್ಯಾಲಂಯಾದ ಪ್ರಾಚಾರ್ಯರಾದ ವೀರಭದ್ರಯ್ಯ ಹಿರೇ ಮಠ, ಶಾರದ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಬಿ.ಹೈಂದವಿ ಮಧುಸೂದನ ಗುಪ್ತಾಜೀ,ಮುಖ್ಯಸ್ಥಾರಾದ ಕಿಶೋರ ಕುಮಾರ ಸೇರಿದಂತೆ ಉಪನ್ಯಾಸಕರು ಅಭಿನಂದಿಸಿದ್ಧಾರೆ.



ಸರಿಯಾದ ದಿಕ್ಕಿನಲ್ಲಿ ನಿಧಾನವಾಗಿ ಸಾಗಿದರೂ, ಯಶಸ್ಸನ್ನು ಖಂಡಿತವಾಗಿ ತಲುಪಬಹುದು. ಆದರೆ, ದಿಕ್ಕಿಲ್ಲದೆ ವೇಗವಾಗಿ ಓಡಿದರೆ, ನೀವು ಕೇವಲ ದಣಿದು ಹೋಗುತ್ತೀರಿ, ಗುರಿಯನ್ನು ತಲುಪುವುದಿಲ್ಲ...

–ಸೈಯದ್ ತಾಜುದ್ದಿನ್

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ರಾಯಚೂರು ಉತ್ಸವ: ಫೆಬ್ರವರಿ 4ರಿಂದ ಹೆಲಿಕ್ಯಾಪ್ಟರ್ ರೈಡ್

**ರಾಯಚೂರು,ಜ.26–**ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 4ರಿಂದ 9ರವರೆಗೆ ರಾಯಚೂರು ಜಿಲ್ಲೆಯ ನಾಗರೀಕರಿಗೆ ಬಾನಂಗಳದಿಂದ ರಾಯಚೂರು ವೀಕ್ಷಣೆಗೆ ರಾಯಚೂರು ಬೈಸ್ಕಯ್ ಎಂಬ ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವನ್ನು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವು ಫೆಬ್ರವರಿ 4ರಿಂದ 9ರವರೆಗೆ ಪ್ರತಿ ದಿನ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಮಧ್ಯಾಹ್ನ 12.30 ರಿಂದ ಸಂಜೆ 4.30ರವರೆಗೆ ಇರುತ್ತದೆ. ಪ್ರತಿಯೊಬ್ಬರಿಗೆ 3,500 ರೂ. ಶುಲ್ಕ ಇರುತ್ತದೆ. 2 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿರುತ್ತದೆ.

ಆನ್‌ಲೈನ್ ಟಿಕೇಟ್ ಬುಕ್ಕಿಂಗ್‌ಗೆ ವೆಬ್‌ಸೈಟ್ ವಿಳಾಸ: ತಿತಿತಿ.ಜಟುಣಚಿಥು.ಛಿಂಟ ಅಥವಾ ಥಿಣಣಠಿ:/ /ಚಿಡಿಜ.ರಂರಂಟಜ/ಛಿಇಆಡಿತ್ಥಿತಿಡ್ಥಿಎಜಔತಃಈಜಎ ಮೂಲಕ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಫ್‌ಲೈನ್ ಟಿಕೇಟ್‌ಗಾಗಿ ಮೊಬೈಲ್ ಸಂಖ್ಯೆ: 9482565016, 9448527188, 9611112356, 7676522104, 6362238100ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ರಾಷ್ಟ್ರೀಯ ಮತದಾರರ ದಿನಾಚರಣೆ



ಧೈರ್ಯದ ದಾರಿ

**ರಾಯಚೂರು,ಜ.26–**ಇಲ್ಲಿನ ಜಿಲ್ಲಾಡಳಿತದಿಂದ ಭಾರತ ಚುನಾವಣಾ ಆಯೋಗದ ಸಹಯೋಗದಲ್ಲಿ ಜನವರಿ 25ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ನಡೆಯಿತು.

ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ, 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಮತದಾನ ವಾಡುವುದು ಸಾಂವಿಧಾನಿಕ ಹಕ್ಕು ಮತ್ತು ಕರ್ತವ್ಯವಾಗಿದೆ. ಪ್ರಜಾಪ್ರಭುತ್ವದ ಸುಭದ್ರತೆಗಾಗಿ ಅರ್ಹ ದೇಶದ ಪ್ರತಿಯೊಬ್ಬ ಪ್ರಜೆಯೂ ಮತದಾನ ಪ್ರಕ್ರಿಯಲ್ಲಿ ಭಾಗವಹಿಸಬೇಕು. ಸಂವಿಧಾನದತ್ತವಾಗಿ ದೊರೆತಿರುವ ಮತದಾನದ ಹಕ್ಕನ್ನು ಅರಿತು ಸ್ವಂತ ವಿವೇಚನೆಯಿಂದ ಮತದಾನ ಮಾಡಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿ, ಯುವ ಮತದಾರರ ನೋಂದಣಿ ಹಾಗೂ ಮತದಾನಕ್ಕೆ ಪ್ರೋತ್ಸಾಹಿಸಲು ಮತ್ತು ಜಾಗೃತಿ ಮೂಡಿಸಲು ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಮಹತ್ವದ ಸ್ಥಾನ ನೀಡಲಾಗಿದೆ. ಮತದಾನದ ಮಹತ್ವವನ್ನು ಅರಿತು ಪ್ರತಿಯೊಬ್ಬರು ಮತದಾನ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕು ಎಂದು ಸಲಹೆ ಮಾಡಿದರು. ವಿಜೇತರಿಗೆ ಪ್ರಮಾಣಪತ್ರ: ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ರಿಗೆ ಇದೆ ವೇಳೆ ಪ್ರಮಾಣಪತ್ರ ವಿತರಿಸಲಾಯಿತು.ಇದಕ್ಕೂ ಮೊದಲು, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರಿಂದ ಪ್ರತಿಜ್ಞಾವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರು ಣಾಂಗ್ಸುಗಿರಿ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂ ಪಣ್ಣ ಸಜ್ಜನ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಕಾರಿ ಕುಮಾರಸ್ವಾಮಿ, ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷರಾಣಿ ಸೇರಿದಂತೆ ಇತರರು ಇದ್ದರು. ದಂಡಪ್ಪ ಬಿರಾದಾರ ನಿರೂಪಿಸಿದರು. ಸದ್ದಾಶಿವಪ್ಪ ವಂದಿಸಿದರು.

# ಸಂವಿಧಾನದ ಮೌಲ್ಯಗಳನ್ನು ಜನರ ನಡುವೆ ತಲುಪಿಸುವ ಹೆಜ್ಜೆ: ಸೈಯದ್ ನಜೀರುದ್ದೀನ್ ಖಾದ್ರಿ ಗುರು.



**ಮಾನ್ವಿ,ಜ.27–** ಸಂದರ್ಭದಲಿ ಲಕ್ಷ್ಮಿ ದೇವಿ ನಾಯಕ್ ..ಕೆ ಬಸವಂತಪ್ಪ ಸೈಯದ್ ಅಬಿದ್ ಖಾದ್ರಿ ..ರಾಜಾ ಸುಭಾಷ್ ನಾಯಕ್ ...ಸೈಯದ್ ಸಾಜಿದ್ ಖಾದ್ರಿ ...ಹುಸೇನ್ ಬೇಗ್ ಮೊಹಮ್ಮದ್ ಇಸ್ಮಾಯಿಲ್ ಮಹೆಮುದ್ ಸಾಬ್. ವಕೀಲ ದತ್ತಾತ್ರಯ ವಕೀಲ ಯಲ್ಲಪ್ಪ. ರಹೇಮತ್ ಪ್ರಕಾಶ್ ಮತ್ತು ಇತರರು

# ಭಾರತದ ಹೆಮ್ಮೆಯ ನಾರಿ ಶಕ್ತಿಯ ಪ್ರತೀಕ ಹಂಸಜಾ ಶರ್ಮ
## (ಗಣರಾಜ್ಯೋತ್ಸವದ ಪೆರೇಡ್ ನಲ್ಲಿ ಇಂಡಿಯನ್ ಆರ್ಮಿಯ ವಿಕಸಿತ ದರ್ಶನ)

ಭಾರತದ ಹೆಮ್ಮೆಯ ಮಿಲಿಟರಿ ಹೆಲಿಕಾಪ್ಟರ್ ರುದ್ರವನ್ನು ಚಲಾಯಿಸುತ್ತಿರುವ ಮೊದಲ ಮಹಿಳಾ ಪೈಲೆಟ್ ಕ್ಯಾಪ್ಟನ್ ಹಂಸಜಾ ಈ ವರ್ಷದ ಗಣರಾಜ್ಯೋತ್ಸವದ ಪೆರೇಡ್ ನಲ್ಲಿ ಇಂಡಿಯನ್ ಆರ್ಮಿಯ ವಿಕಸಿತ ದರ್ಶನವನ್ನು ಮಾಡಿಸಲಿದ್ದಾರೆ. ನಾಯಕತ್ವ ಹಾಗೂ ಯುದ್ಧ ಸನ್ನದ್ಧತೆಯ ಸಂಪೂರ್ಣ ಜವಾಬ್ದಾರಿಯನ್ನು ಮಹಿಳೆಯರು ಹೊತ್ತು ಸಾಗುತ್ತಿರುವ ಭಾರತ ದೇಶದ ಮಿಲಿಟರಿ ಪಡೆಯ ಹೆಮ್ಮೆಯ ಪ್ರದರ್ಶನ ಇದಾಗಲಿದೆ.

ಜಮ್ಮುವಿನಲ್ಲಿ ಹುಟ್ಟಿ ಬೆಳೆದ ಹಂಸಜ ಅವರು ಭಾರತ ದೇಶದ ಹೆಮ್ಮೆಯ ನಿರ್ಮಾಣದ ಅತ್ಯಾಧುನಿಕ ಇಂಡಿಜೀನಿಯಸ್ ಆದ ರುದ್ರ ಹೆಲಿಕಾಪ್ಟರ್ (ಂಬಲೂ-ಘಖಖ) ಅನ್ನು ಜನವರಿ 13 ರಂದು ಮೈಲಿಗಲ್ಲನ್ನು ಮುಟ್ಟುವ ಮೂಲಕ ಹೊಸ ಇತಿಹಾಸವನ್ನು ದಾಖಲಿಸಿದ್ದಾರೆ.

ಜಮ್ಮು ಕಾಶ್ಮೀರ ಕೇಂದ್ರ ಆಡಳಿತ ಪ್ರದೇಶದ ಜಮ್ಮುವಿನ ಹಿರಿಯ ಜರ್ನಲಿಸ್ಟ ರಶ್ಮಿ ಶರ್ಮ ಅವರ
ಮಗಳು ಹಂಸಜಾ ಸೇಂಟ್ ಜೇವಿಯರ್ ಕಾನ್ವೆಂಟ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಕಲಿತಿದ್ದು ಗೌರ್ಮೆಂಟ್ ಕಾಲೇಜ್ ಫಾರ್ ಉಮೆನ್ ನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ ಅಲ್ಲಿಯೇ ಪೆರೇಡ್ ನಲ್ಲಿ ಭಾಗವಹಿಸಿದ್ದರು. ಭಾರತೀಯ ಮಿಲಿಟರಿಯನ್ನು ಸೇರುವ ಮುನ್ನವೇ ಗಣರಾಜ್ಯೋತ್ಸವದ ಬೆರಳಿನಲ್ಲಿ ಭಾಗವಹಿಸಿದ್ದ ಆಕೆ ನಂತರ ವಾಯು ಪಡೆಗೆ ಸೇರ್ಪಡೆಯಾದರು.

ಕೊಂಬಾಟ್ ಏವಿಯೇಟರ್ ಕೋರ್ಸ ನಂಬರ್ 40ರಲ್ಲಿ ಭಾಗವಹಿಸಿದ 33 ಜನ ಆಫೀಸರ್ಸ್ ಗಳಲ್ಲಿ ಮೊದಲ ಆರ್ಡರಿನಲ್ಲಿ ಪೂರೈಸಿದ ಆಕೆ ತನ್ನ ಈ ಅದ್ವಿತೀಯ ಸಾಧನೆಗೆ ಮೆಚ್ಚುಗೆ ಗಳಿಸಿದಳು. ಕ್ಯಾಟ್ಸ್ ನ ಇತಿಹಾಸದಲ್ಲಿ ಚೀತಾ ಟ್ರೋಫಿಗಳಿಸಿದ ಮೊದಲ ಮಹಿಳಾ ಏವಿಯೇಟರ್ ಎಂದು ಗೌರವ ಪಡೆದಳು

ನಾಥ9ನ್ ಆರ್ಮಿ ಕಮಾಂಡರ್ ಜನರಲ್ ಉಪೇಂದ್ರ ದ್ವಿವೇದಿ ಅವರು ಹಂಸಜಾ ಅವರ ಈ ಅದ್ವಿತೀಯ ಸಾಧನೆಗೆ ಅಭಿನಂದಿಸಿದರು. ಈ ತರಬೇತಿಯನ್ನು ಆರ್ಮಿ ಟ್ರೈನಿಂಗ್ ಕಮಾಂಡ (ಂಖಿಖಂಅ) ನವರು ಕೊಡ ಮಾಡುವ ಈ ತರಬೇತಿಯು ಅತ್ಯಂತ ಕಠಿಣ ತಮ ಹಾಗೂ ಹೆಚ್ಚಿನ ತೀವ್ರತೆಯ ಯುದ್ಧ ಕಾರ್ಯಾಚರಣೆಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಪೈಲಟಗಳನ್ನು ತಯಾರು ಮಾಡುತ್ತದೆ.

ಹಂಸಜಾ ಅವರ ಕಾಲ್ನಡಿಗೆಯಿಂದ ಪ್ರಾರಂಭವಾದ ಬದುಕಿನ ಪಯಣ ಇದೀಗ ಹೆಲಿಕಾಪ್ಟರ್ ನ ಸವಾರಿ ಮಾಡುವವರಿಗೆ ಆರಂಭವಾದದ್ದು ಹೀಗೆ. ಜಮ್ಮುವಿನ ಸೇಂಟ್ ಜೇವಿಯರ್ ಶಾಲೆಯ ತರಗತಿ ಕೋಣೆಯಲ್ಲಿ "ಬಿ ಬ್ರೂಟಲ್ ಟು ಯುವರ ಸೆಲ್ಫ್ " ಎಂಬ ಗೋಡೆಯ ಬರಹ ಒಂದು ಆಕೆಗೆ ತನಗಿರುವ ಮಿತಿಗಳನ್ನು ವಿಸ್ತರಿಸಿಕೊಳ್ಳುವ ನಿಟ್ಟಿನಲ್ಲಿ ಇಂಧನವಾಗಿ ಕಾರ್ಯನಿರ್ವಹಿಸುತ್ತಿತ್ತು. ನಿಮಗೆ ನೀವು ಕಠಿಣವಾಗಿರಿ
ಎಂಬ ಅರ್ಥವನ್ನು ಹೊತ್ತ ಆ ಗೋಡೆ ಬರಹ ಆಕೆಯ ಬದುಕಿಗೆ ಅತಿ ದೊಡ್ಡ ತಿರುವನ್ನು ಕೊಟ್ಟಿದ್ದು ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಕಠಿಣ ಪರಿಶ್ರಮ, ಬದ್ಧತೆ ಹಾಗೂ ಸತತ ಪ್ರಯತ್ನಗಳ ಅವಶ್ಯಕತೆಯನ್ನು ಆಕೆಗೆ ಮನಗಾಣಿಸಿತ್ತು....ಅಂತೆಯೇ ಆಕೆ ತನ್ನ ಬದುಕಿನ ಮೂಲ ಉದ್ದೇಶವನ್ನು ಕಂಡುಕೊಳ್ಳಲು ಕಾರಣವಾಗಿತ್ತು.

ಹತ್ತು ಹಲವಾರು ಸವಾಲುಗಳು, ವೈದ್ಯಕೀಯ ತೊಂದರೆಗಳು, ಮಿಲಿಟರಿ ಬದುಕಿನ ತಾತ್ಕಾಲಿಕವಾದ ನಿರಾಕರಣೆಗಳ ನಡುವೆಯೂ ಅತ್ಯಂತ ಕಠಿಣ ತರಬೇತಿಯನ್ನು ಸದಾ ಯುದ್ಧ ಸನ್ನದ್ಧವಾಗಿರುವ ಮಾನಸಿಕ ಸ್ಥಿರತೆಯನ್ನು ಕಾಯ್ದುಕೊಂಡು ಬಂದ ಆಕೆ ಅಂತಿಮವಾಗಿ ನಾಶಿಕ್ ನಲ್ಲಿ ಇರುವ ಯುದ್ಧ ನಿರತ ಮಿಲಿಟರಿಯ ವಾಯುಯಾನ ಟ್ರೈನಿಂಗ್ ತರಬೇತಿಗೆ (ಅಂಂಖಿಖ ಕೊಂಬಾಟ್ ಆರ್ಮಿ ಏವಿಯೇಷನ್ ಟ್ರೈನಿಂಗ್ ಸ್ಕೂಲ್ ) ಗೆ ಹಾಜರಾದ ಆಕೆ ಅಲ್ಲಿ ಅತ್ಯುನ್ನತ ಅಂಕಗಳೊಂದಿಗೆ ತರಬೇತಿಯನ್ನು ಪೂರೈಸಿದಳು.ಅತ್ಯಂತ ಕಠಿಣ ತರಬೇತಿಯಲ್ಲಿ ಪಾಲ್ಗೊಂಡ ಆಕೆ ತರಬೇತಿಯ ಅಂತಿಮ ಘಟ್ಟದಲ್ಲಿ ಬೆಸ್ಟ್ ಕೊಂಬ್ಯಾಟ್ ಏವಿಯೇಟರ್ ಗೆ ನೀಡಲಾಗುವ ಸಿಲ್ವರ್ ಚೀತಾ ಟ್ರೋಪಿಯನ್ನು ಗಳಿಸಿದ ಮೊದಲ ಮಹಿಳಾ ಪೈಲಟ್ ಆಗಿ ಆಯ್ಕೆಯಾದಳು.

ಅಪ್ರತಿಮ ಕೌಶಲದ ಜೊತೆ ಜೊತೆಗೆ ಕ್ಯಾಪ್ಟನ್ ಹಂಸಜಾ ಶರ್ಮ ನಾರಿ ಶಕ್ತಿಯನ್ನು ಕ್ರಿಯಾ ರೂಪಕ್ಕೆ ಇಳಿಸುವಲ್ಲಿ ಅಪ್ರತಿಮ ಸಾಧಕಿ ಎನಿಸಿಕೊಂಡರು. ಸಾಮಾನ್ಯವಾಗಿ ಪುರುಷ ಪ್ರಾಬಲ್ಯದ ಮಿಲಿಟರಿಯಲ್ಲಿ

ತಮಗಿರುವ ಮಿತಿಗಳ ತಡೆ ಗೋಡೆಗಳನ್ನು ದಾಟಿ ಈ ಸಾಧನೆ ಮಾಡಿದ ಕೆಲವೇ ಕೆಲವು ಮಹಿಳಾ ಯೋಧರಲ್ಲಿ ಹಂಸಜ ಕೂಡ ಒಬ್ಬರಾಗಿದ್ದಾರೆ. ರಕ್ಷಣಾ ಚಟುವಟಿಕೆಗಳಲ್ಲಿ ಸ್ತ್ರೀಯರು ಭಾಗವಹಿಸುವಂತೆ ಇಡೀ ದೇಶದಾದ್ಯಂತ ಮಹಿಳೆಯರಿಗೆ ಸ್ಫೂರ್ತಿಯಾಗಿ ನಿಂತ ಹಂಸಜ ಅವರ ಕಾರ್ಯದಕ್ಷತೆ ಹಾಗೂ ಬದ್ಧತೆಯ ಕಾರಣದಿಂದಾಗಿ ಇಡೀ ದೇಶದಾದ್ಯಂತ ಅತ್ಯಧಿಕ ಕೌಶಲ್ಯಗಳನ್ನು ಹೊಂದಿದ ಮಹಿಳಾ ಅಭ್ಯರ್ಥಿಗಳು ಆಯ್ಕೆಯಾಗಿ ತರಬೇತಿ ಪಡೆದು ರಕ್ಷಣಾ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಆಕೆ ಪಾಲ್ಗೊಳ್ಳುವ ಪ್ರತಿಯೊಂದು ಹಾರುವಿಕೆಯು ತಂತ್ರಗಾರಿಕೆ, ಸವಾಲುಗಳನ್ನು ಎದುರಿಸಿ ಧೈರ್ಯ, ಧೈರ್ಯ, ದೃಢ ನಿಶ್ಚಯ ಹಾಗೂ ದೃಢ ನಿರ್ಧಾರಗಳಿಂದ ಕೂಡಿದ್ದು ಅಸಾಧ್ಯವನ್ನು ಸಾಧ್ಯವಾಗಿಸುವ ಐತಿಹಾಸಿಕ ದಾಖಲೆಯನ್ನು ಆಕೆ ಮಾಡಿದ್ದಾಳೆ.

ಇದೀಗ ಇದೆಲ್ಲಕ್ಕೂ ಕಳಸವಿಟ್ಟಂತೆ 2026ರ ಗಣರಾಜ್ಯೋತ್ಸವದಲ್ಲಿ ವಾಯುಯಾನದ ಮಹಿಳಾ ಪಡೆಯನ್ನು ಮುನ್ನಡೆಸುವ ಜವಾಬ್ದಾರಿಯು ಆಕೆಯ ಹೆಮ್ಮೆಯ ಪ್ರದರ್ಶನಕ್ಕೆ ಕಿರೀಟಪ್ರಾಯವಾಗಿದೆ. ಹಂಸಜಾ ಈಗ ಭಾರತ ದೇಶದ ನಾರಿ ಶಕ್ತಿಯ ಸಂಕೇತವಾಗಿದ್ದಾಳೆ. ಭಾರತೀಯ ಮಿಲಿಟರಿ ಪಡೆಯ ಅಭಿವೃದ್ಧಿಪರ ಹಾಗೂ ಕಠಿಣ ಸವಾಲುಗಳನ್ನು ಎದುರಿಸುವಲ್ಲಿ ಹೆಣ್ಣುಮಕ್ಕಳ ಸಾಮರ್ಥ್ಯವನ್ನು ಒರೆಗೆ ಹಚ್ಚಿದ್ದು ಇದೀಗ ಜನವರಿ 26ರ ಗಣರಾಜ್ಯೋತ್ಸವ ದಿನದಂದು ತನ್ನ ಪಡೆಯೊಂದಿಗೆ ಪೆರೇಡಿನಲ್ಲಿ ಭಾಗವಹಿಸಲಿರುವ ಹಂಸಜಾ ಮತ್ತು ಅವರ ತಂಡಕ್ಕೆ ಅಭಿನಂದನೆಗಳು

**-ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ**

---

# ಪೋಷಕರಾದ ನಾವು ನಮ್ಮ ಪರಿಸ್ಥಿತಿ ಮಕ್ಕಳಿಗೆ ಅರ್ಥೈಸಬೇಕು ಅವರ ದುರಾಸೆಗಳಿಗೆ ಕಡಿವಾಣ ಸಾಧ್ಯ"

ವಯಸ್ಸಿಗೆ ಬಂದ ಮಗನೊಬ್ಬ ಆನ್ಲೈನ್ ಬೆಟ್ಟಿಂಗ್ ಆಡ್ತಿರೋದು ಗೊತ್ತಾದರೆ ಪಾಲಕರು ಮತ್ತು ಮನೆಯ ಇತರೆ ಸದಸ್ಯರು ಕೂಡಿಸಿಕೊಂಡು ಅವನಿಗೆ ಸ್ವಲ್ಪ ವಿಚಾರಣೆ ನಡೆಸಿ, ತಿಳುವಳಿಕೆ ನೀಡಬೇಕು. ಬೆಟ್ಟಿಂಗ್ ನಲ್ಲಿ ಒಂದು ರೂಪಾಯಿ ಕಳೆದುಕೊಂಡಾಗಲೇ ತಿಳುವಳಿಕೆ ಹೇಳಿ ಒಂದೆರೆಡು ಬಾರಿಸಿದ್ದರೆ, ಇವತ್ತು ಲಕ್ಷಗಟ್ಟಲೇ ಸಾಲ ಮಾಡಿ ನೇಣಿಗೆ ಶರಣಾದ ಮಗನನ್ನು ನೋಡುವ ಪ್ರಮೇಯ ಬರುತ್ತಿರಲಿಲ್ಲ. ಬೆಟ್ಟಿಂಗ್ ವಿಷಯ ಪಕ್ಕದ ಮನೆಯವರಿಗೆ, ಬಂಧುಗಳಿಗೆ ಗೊತ್ತಾದರೆ ನಮ್ಮ ಮತ್ತು ನಮ್ಮ ಕುಟುಂಬದ ಮರ್ಯಾದೆ ಹೋಗುತ್ತದೆಂದು ಭಾವಿಸಿ ಮುಚ್ಚಿಟ್ಟುಕೊಂಡ ತಪ್ಪಿಗೆ ಬೆಲೆ ತೆರಬೇಕಾಯಿತು.

ದುರ್ನಡತೆಗಳು ಮಕ್ಕಳಲ್ಲಿ ಕಂಡ ತಕ್ಷಣ ಕುಟುಂಬದ ಸದಸ್ಯರೆಲ್ಲ ಸೇರಿ ಅವರಿಗೆ ಸ್ಪಷ್ಟ ತಿಳುವಳಿಕೆ ನೀಡಿ, ನಿಮ್ಮ ಕುಟುಂಬ ಬೆಳೆದು ಬಂದ ರೀತಿ, ನೀವು ಎದುರಿಸಿದ ಬಡತನ, ಅವಮಾನಗಳ ಬಗ್ಗೆ ಹೇಳಿ ಅವರಿಗೆ ಅವರ ಜವಾಬ್ದಾರಿ ಮತ್ತು ಗುರಿಗಳನ್ನು ಸ್ಪಷ್ಟಪಡಿಸಿರಿ. ದೊಡ್ಡವರಾದ ಮೇಲೆ ಕಂಟ್ರೋಲ್ ಮಾಡುವುದು ಕಷ್ಟ. ಸಾಲ ಮಾಡುವ ಮಗನನ್ನು ಸಹಿಸಿಕೊಂಡ ಪಾಲಕರು ಮಗನಿಗೆ *"ಹಾಸಿಗೆ ಇದ್ದಷ್ಟು ಕಾಲು ಚಾಚು"* ಅಂತಾ ತಿಳುವಳಿಕೆ ನೀಡಿ ಮತ್ತು ಆ ಸಾಲದ ಭಾರ ಅವನೇ ಹೊರುವಂತೆ ನೋಡಿಕೊಳ್ಳಿ. ಮಕ್ಕಳು ಅನವಶ್ಯಕವಾಗಿ ಮಾಡುವ ಸಾಲವನ್ನು ಪಾಲಕರಾದ ನೀವು ಇನ್ನೇನನ್ನೋ ಮಾರಿ ತೀರಿಸಬೇಡಿ. ಒಮ್ಮೆ ಈ ರೀತಿ ಮಾಡಿಬಿಟ್ಟರೆ, ಮಕ್ಕಳಿಗೆ ಸಾಲ ಮಾಡುವ ರುಚಿ ಹತ್ತಿಬಿಡುತ್ತೆ. ಹೇಗಾದರೂ ಪಾಲಕರು ಇದ್ದಾರೆ ಅನ್ನುವ ಭರವಸೆ ನೀವು ಮೂಡಿಸಿಬಿಟ್ಟಿರುತ್ತೀರಿ. ಇಲ್ಲಿ ತಪ್ಪು ಯಾರದ್ದು? ಮಕ್ಕಳು ಮಾಡುವ ತಪ್ಪುಗಳನ್ನು ಮುಚ್ಚಿಟ್ಟುಕೊಂಡು ಇಂಬು ನೀಡುತ್ತಾ ಹೋದಂತೆ ನಾವು ಪಡೆಯುವುದಕ್ಕಿಂತ ಕಳೆದುಕೊಳ್ಳುವುದು ಜಾಸ್ತಿ ಆಗುತ್ತೆ. ಮರ್ಯಾದೆ ಬೀದಿಗೆ ಬರಲು ಮಕ್ಕಳಷ್ಟೇ ತಪ್ಪು ಪಾಲಕರಾದ ನಾವು ಮಾಡಿಬಿಡುತ್ತೇವೆ. ಕೊನೆಗೆ ಇಡೀ ಕುಟುಂಬವೇ ಸರ್ವನಾಶವಾಗುತ್ತದೆ.

**-ಮಹಿಬೂಬ್ ಮದ್ಲಾಪುರ**
**ಸಂಪನ್ಮೂಲ ವ್ಯಕ್ತಿಗಳು ಮಾನವಿ**

---

# ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಸಂಸ್ಕರಣ ಸಹಕಾರ ಸಂಘದಲ್ಲಿ ಗಣರಾಜ್ಯೋತ್ಸವ

ಧೈರ್ಯದ ದಾರಿ

**ರಾಯಚೂರು,ಜ.27-** ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದಲ್ಲಿ ಜನವರಿ 26ರಂದು ಗಣರಾಜ್ಯೋತ್ಸವ ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಪತಂಗೆ ಜಯವಂತರಾವ್ ಅವರು ಸಂಘದ ಆಡಳಿತ ಕಚೇರಿಯಲ್ಲಿ ಮತ್ತು ಉಪಾಧ್ಯಕ್ಷರಾದ ಶಶಿಧರ ಪಾಟೀಲ್ ಅವರು ಗಂಜ್ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿದರು.




ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಪತಂಗೆ ಜಯವಂತರಾವ್ ಅವರು ಮಾತನಾಡಿ, ಭಾರತವು ಸಾರ್ವಭೌಮ ಮತ್ತು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಸಂವಿಧಾನದ ರಚನೆಗೆ ಕೊಡುಗೆ ನೀಡಿದ ಪ್ರತಿಯೊಬ್ಬ ಮಹನಿಯರನ್ನು ಸ್ಮರಿಸುವ ದಿನ ಇದಾಗಿದೆ. ಸಂವಿಧಾನ ಕೇವಲ ದಾಖಲೆಯಲ್ಲ; ಇದು ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದ ಆತ್ಮವಾಗಿದೆ. ಎಲ್ಲರಿಗೂ ನ್ಯಾಯ, ಸಮಾನತೆ ಮತ್ತು ಸ್ವಾತಂತ್ರವನ್ನು ಖಾತ್ರಿಪಡಿಸುತ್ತದೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದು ಮಾತ್ರವಲ್ಲದೆ ಸಾಮಾಜಿಕ ಸಾಮರಸ್ಯ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಬೆಳೆಯುತ್ತಿರುವ ಭಾರತಕ್ಕಾಗಿ ಕೆಲಸ ಮಾಡಲು ನಾವು ಇಂದು ಪ್ರತಿಜ್ಞೆ ಮಾಡೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ವ್ಯವಸ್ಥಾಪಕರಾದ ಬಂದಯ್ಯ ಸ್ವಾಮಿ, ವ್ಯವಸ್ಥಾಪಕರಾದ ನರಸಿಂಹಪ್ಪ, ಲೇಖಪಾಲಕರಾದ ನರಸಿಂಹಪ್ಪ, ಎಂ.ಮಲ್ಲಿಕಾರ್ಜುನ, ರೇಖಮ್ಮ, ಎಂ.ನಾಗರಾಜ್ ಮತ್ತು ಇನ್ನಿತರರು ಉಪಸ್ಥಿತರಿದ್ದರು.

---

# ಜಿಲ್ಲಾಧಿಕಾರಿಗಳ ಗೃಹ ಕಚೇರಿಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ



ಧೈರ್ಯದ ದಾರಿ

**ರಾಯಚೂರು,ಜ.27-**ರಾಯಚೂರಿನ ಜಿಲ್ಲಾಧಿಕಾರಿಗಳ ಗೃಹ ಕಚೇರಿಯಲ್ಲಿ ಜನವರಿ 26ರಂದು ಗಣರಾಜ್ಯೋತ್ಸವ ದಿನಾಚರಣೆ ನಡೆಯಿತು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಬಳಿಕ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ನಿಯಾಜ್, ಎನ್.ವಿ.ಡಿ. ಸ್ಪರ್ಧಾ ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ, ಸಿ.ಆರ್.ಪಿ ರಾವುತರಾವ್ ಬರೂರ, ಕೆ.ಇ.ಬಿ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಹಿರಲಾಲ್, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಿಬ್ಬಂದಿ ಮತ್ತು ಕೆ.ಇ.ಬಿ ಪ್ರಾಥಮಿಕ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

---

# ದೇಶದ ಏಕತೆ, ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆ : ಸಂಜೀವಕುಮಾರ ಕಂದಗಲ್



ಧೈರ್ಯದ ದಾರಿ

**ಲಿಂಗಸುಗೂರು,ಜ.27-** ರಾಷ್ಟ್ರೀಯ ಐಕ್ಯ ಹಾಗೂ ಸಮಗ್ರತೆಯನ್ನು ಕಾಪಾಡಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ಎಲ್ಲರ ಅಭ್ಯುದಯದಲ್ಲಿ ನಮ್ಮ ಅಭ್ಯುದಯವನ್ನು ಕಾಣಬೇಕಿದೆ ಎಂದು ಸಂಸ್ಥೆಯ ಅಧ್ಯಕ್ಷ ಸಂಜೀವಕುಮಾರ ಕಂದಗಲ್
ಕರೆ ನೀಡಿದರು.

ಪಟ್ಟಣದ ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾವಿದ್ಯಾಲಯ, ಶ್ರೀ ಸಂಜೀವ ಶಿಕ್ಷಣ ಮಹಾವಿದ್ಯಾಲಯ(ಬಿ,ಇಡಿ) ಕಾಲೇಜಿನ ಆವರಣದಲ್ಲಿ 77 ನೇ ಗಣರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೇರವೇರಿಸಿ ಮಾತನಾಡಿದ ಅವರು,1947 ರಲ್ಲಿ ಬ್ರಿಟಿಷರಿಂದ ದೇಶ ಸ್ವಾತಂತ್ರ್ಯ ಪಡೆದರೂ ರಾಜರ ಆಳ್ವಿಕೆಯಲ್ಲಿ ಆಡಳಿತ ಹಲವು ಪ್ರದೇಶಗಳಾಗಿ ಹರಿದು ಹಂಚಿ ಹೋಗಿತ್ತು. ಈ ಸಂದರ್ಭದಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲ್ ಮುಂದಾಳತ್ವದಲ್ಲಿ ದೇಶವನ್ನು ಒಗ್ಗೂಡಿಸಲಾಯಿತು. ಬಳಿಕ ಸಂವಿಧಾನ ರಚನೆ ಮಾಡಲು ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆ ಮಾಡಲಾಯಿತು. ಇದರ ಅಂಗವಾಗಿ 1950 ರ ಜನವರಿ 26 ರಂದು ಸಂವಿಧಾನ ಅಸ್ತಿತ್ವಕ್ಕೆ ಬಂದಿತು ಎಂದರು.

ಅಂಬೇಡ್ಕರ್ ರಚಿಸಿದ ಭಾರತದ ಸಂವಿಧಾನವು ನಿಜಕ್ಕೂ ಒಂದು ಅದ್ಭುತ ಕೃತಿ. ಅದರ ಮೂಲ ಆಶಯಗಳು ಜಗತ್ತಿನ ಪ್ರತಿಯೊಂದು ದೇಶಕ್ಕೂ ಮಾದರಿಯಾಗಿವೆ. ಸಂವಿಧಾನವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಸ್ಥಾಪಿಸಿದೆ ಎಂದರು.

ಈ ಸಂದರ್ಭದಲ್ಲಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಅಮರೇಶ ಗೌಡೂರು, ಉಪನ್ಯಾಕರಾದ ವೆಂಕಟೇಶ ಕವಿತಾಳ, ವೆಂಕಟೇಶ ಪೂಜಾರಿ, ಚನ್ನಬಸವ, ಶಬ್ಬೀರಸಾಬ ಸೇರಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE